# ಸ್ವನಗರಿ

ರಮೇಶ್ ಕುಮಾರ್ ನಾಯಕ್

ಕಲೆ: ಪ್ರವೀಣ್ ಆಚಾರ್ಯ

ಅದಾಗಲೇ ಆ ಟೆಂಪೋ ಭರ್ತಿಯಾಗಿತ್ತು. ಕುರಿಮಂದೆಯಂತೆ ತುಂಬಿದ್ದ ಮಂದಿಯ ನಡುವೆ ನುಸುಳಿ ಹಿಂದಿನ ಸೀಟಿನಲ್ಲಿ ಪ್ರಯಾಸಪಟ್ಟು ಚೂರು ಜಾಗ ಮಾಡಿಕೊಂಡು ಕೂತೆ. ಮೇ ತಿಂಗಳ ಸೆಕೆಯ ಬಿಸಿ. ಹಣ್ಣು ಮಾಡಲು ಮಣ್ಣಿನ ಹಂಡೆಯಲ್ಲಿ ಹಾಕಿಟ್ಟ ಬಾಳೆ ಕಾಯಿಯಂತೆ ಜನ ಬೆವರುತ್ತಿದ್ದರು.

``ಥೋ ಚಾಲೂ ಮಾಡು ಮಾರಾಯ...'' ಎಂದ್ಯಾರೋ ಕೂಗಿದರು. ತಕ್ಷಣ ಚಾಲಕ ಟೆಂಪೋವನ್ನು ಸ್ಟಾರ್ಟ್ ಮಾಡಿ ಚೂರು ಮುಂದೆ ಚಲಾಯಿಸಿದಂತೆ ಮಾಡುತ್ತ ಮತ್ತೆ ರಿವರ್ಸ್ ಅಲ್ಲಿಯೇ ತಂದು ನಿಲ್ಲಿಸಿದ! ಇಬ್ಬರು ಬುರ್ಖಾಧಾರಿ ನವಾಯತ ಹೆಂಗಸರು ಒಂದಿಷ್ಟು ಮಕ್ಕಳುಮರಿಗಳೊಂದಿಗೆ ಓಡೋಡಿ ಬಂದರು. ಅವರನ್ನೆಲ್ಲ ಕ್ಲೀನರ್ ಟೆಂಪೋದೊಳಗೆ ಲಗೇಜುಗಳಂತೆ ತುರುಕಿದ. ಮತ್ತೆ, ``ಇನ್ನೆಷ್ಟು ಹೊತ್ತು ಮಾರಾಯಾ'' ಎಂಬ ದನಿ ಅಶರೀರವಾಣಿಯಂತೆ ಕೇಳಿ ಬಂತು. ಮತ್ತೆ ಎರಡು ಮಾರು ಮುಂದೆ ಹೋದ ಟೆಂಪೋ ಪುನಃ ಇದ್ದಲ್ಲಿಗೇ ಬಂದು ನಿಂತಿತು!

ಹರಿಕಂತ್ರ ಹೆಂಗಸೊಬ್ಬಳು ಹಸಿಹಸಿ ಮೀನಿನ ಬುಟ್ಟಿಯನ್ನು ತಲೆಯ ಮೇಲೆ ಹೊತ್ತುಕೊಂಡು ಎದುಸಿರು ಬಿಡುತ್ತ ಬಂದಳು. ಟೆಂಪೋ ಕ್ಲೀನರ್ ಆ ಬುಟ್ಟಿಯನ್ನು ಅನಾಮತ್ತು ಎತ್ತಿದವನೇ, ಭಟ್ರೆ... ಒಂಚೂರು ಕಾಲೆತ್ತಿ ಮಾರಾಯರಾ ಅಂದವನೇ ಅವರು ಕೂತ ಸೀಟಿನ ಕೆಳಗೆ ತಳ್ಳಿದ. ಗಾಳಿಯಾಡಲೂ ಜಾಗವಿಲ್ಲದ ಟೆಂಪೋದೊಳಗೆ ಆ ಧಡೂತಿ ಹೆಂಗಸು ಅದ್ಹೇಗೋ ತೂರಿಕೊಂಡಳು. ಒಂದೆಡೆ ನವಾಯತ ಹೆಂಗಸರ ದುಬೈ ಅತ್ತರಿನ ಘಾಟು, ಇನ್ನೊಂದೆಡೆ ಬಂಗುಡೆ ಮೀನಿನ ಘಮಲು... ಯಾರದೋ ಮನೆಯ ಪೂಜೆಗೆ ಹೊರಟಿದ್ದ ಸುಬ್ರಾಯ ಭಟ್ಟರು ಪ್ರಾಣಾಯಾಮ ಮಾಡುವವರಂತೆ ಮೂಗನ್ನು ಮುಚ್ಚಿಕೊಂಡು ಬಾಯಿಯಿಂದ ಶ್ವಾಸ ತೆಗೆದುಕೊಳ್ಳುತ್ತಿದ್ದುದು ತಮಾಷೆಯಾಗಿ ಕಾಣುತ್ತಿತ್ತು!

ಹಿಂದಿನಿಂದ ಮತ್ತೊಂದು ಟೆಂಪೋ ಬರುತ್ತಿದ್ದಂತೆ ಈ ಟೆಂಪೋ ಏಕ್‌ದಂ ಮುಂದಕ್ಕೆ ಚಲಿಸಿತು. ಟೆಂಪೋದಲ್ಲಿದ್ದವರು ಒಬ್ಬರ ಉಸಿರನ್ನು ಮತ್ತೊಬ್ಬರು ತೆಗೆದುಕೊಳ್ಳುತ್ತಿರುವಂತೆ ತೋರುತ್ತಿತ್ತು. ಕಾಲೇಜು ಹುಡುಗರು, ನಸುಕಿನಿಂದಲೇ ಮರಳು ಹೊತ್ತು ಹೊತ್ತು ಸುಸ್ತಾಗಿ ಮನೆಗೆ ಮರಳುವವರು, ಮೀನು ಮಾರುವ ಮಹಿಳೆಯರು, ಚೆಕ್‌ಅಪ್‌ಗೆಂದು ಖಾಸಗಿ ಆಸ್ಪತ್ರೆಗೆ ಹೊರಟ ತುಂಬು ಗರ್ಭಿಣಿಯರು, ಬಾರದ ಮಾಸಾಶನ ಇತ್ಯಾದಿ ಗೋಳು ಪರಿಹರಿಸಿಕೊಳ್ಳಲು ತಾಲ್ಲೂಕು ಕಚೇರಿಗೆ ಹೊರಟ ಹಣ್ಣು ಹಣ್ಣು ಮುದುಕರು... ಇವರಿಗೆಲ್ಲ ಟೆಂಪೋವೇ ಇಲ್ಲಿ ಸಂಚಾರ ಸಾರಥಿ.

ಕುತೂಹಲಕ್ಕೆಂಬಂತೆ ಜನರ ಮೇಲೆ ಕಣ್ಣು ಹಾಯಿಸಿದೆ. ಅಂಥ ಸೆಕೆ, ನೂಕುನುಗ್ಗಲಿನಲ್ಲೂ